ಪಿಡಬ್ಲು- 41 ಸಿಡಬ್ಲು-71

**1ನೇ ಅಧಿಕ ಜಿಲ್ಲಾ ವ ಸತ್ರ ನ್ಯಾಯಾಧೀಶರು , ಧಾರವಾಡ ಮೊಕ್ಕಾಂ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ.**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ದೇವೆಂದ್ರ ತಂದೆಃ ಎಲಪ್ಪ ಮಾವಿನಂಡಿ |
| ವಯಸ್ಸು | ಃ | 34 ವರ್ಷ. |
| ಉದ್ಯೋಗ | ಃ | ಪಿ ಎಸ್ ಐ, Hubballi Sub Urban PS |
| ವಾಸಸ್ಥಳ | ಃ | ಹುಬ್ಬಳ್ಳಿ |

( ದಿನಾಂಕ 12-08-2026 ರಂದು ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು)

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರಕಾರಿ ಅಭಿಯೋಜಕರಿಂದ**

ನಾನು ಗೋಕುಲ ರೋಡ ಪೋಲಿಸ ಠಾಣೆಯಲ್ಲಿ ದಿಃ 24-06-2022 ರಿಂದ 25.07.2024 ರವರೆಗೆ ಪಿ ಎಸ್ ಐ ಆಗಿ ಕರ್ತವ್ಯ ಸಲ್ಲಿಸಿರುತ್ತೇನೆ.

2. ದಿಃ 15-05-2024 ರಂದು ಚಾಸಾಃ16 ದಕ್ಷಿಣ ಉಪವಿಭಾಗದ ಎಸಿಪಿ ರವರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ಪತ್ತೆ ಮಾಡಿಕೊಂಡು ಬರಲು ನನ್ನನ್ನು ಮತ್ತು ಚಾಸಾಃ 18, ಚಾಸಾಃ 72 ರಿಂದ 75 ರವರನ್ನು ನೇಮಕ ಮಾಡಿ ಕಳುಹಿಸಿದರು. ನಿಪಿ-69 ಜ್ಞಾಪನಾ ಪತ್ರವನ್ನು ನೋಡಿ ಅದರಲ್ಲಿರುವ ತನ್ನ ಸ್ವೀಕೃತಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಸಾಕ್ಷಿ ಸಹಿಯನ್ನು **ನಿಪಿ-69(ಬಿ)** ಎಂದು ಗುರುತಿಸಲಾಯಿತು.

3. ನಿಪಿ-69 ಆದೇಶದಂತೆ ನಾವೆಲ್ಲರೂ ಆರೋಪಿಯ ಪತ್ತೆಗೆ ತೆರಳಿದೆವು. ಆರೋಪಿಯನ್ನು ಹುಬ್ಬಳ್ಳಿಯ ಪರಿಸರಿದಲ್ಲಿ ಹುಡುಕಾಡಿ ಮಾಹಿತಿ ಪಡೆದುಕೊಂಡೆವು. ನಮಗೆ ದೊರೆತ ಮಾಹಿತಿಯಂತೆ ಆರೋಪಿ ದಾವಣಗೆರೆಯಲ್ಲಿ ಇದ್ದನು. ಅದೇ ದಿನ ಅಂದರೆ ದಿಃ 15.05.2024 ರಂದು ಸಂಜೆ 7-30 ಸಮಯಕ್ಕೆ ಹುಬ್ಬಳ್ಳಿಯಿಂದ ಹೊರಟು ರಾತ್ರಿ 10-45 ಕ್ಕೆ ದಾವಣಗೆರೆ ತಲುಪಿ ಆರೋಪಿಯ ಬಗ್ಗೆ ಮಾಹಿತಿಯನ್ನು ಕಲೆ ಹಾಕಿದೆವು. ಆರೋಪಿಯು ಅಪರಾಧಿಕ ಹಿನ್ನೆಲೆ ಹೊಂದಿದ್ದ ಕಾರಣ ಆತನ ಮುಖ ಚಹರೆ ಬಗ್ಗೆ ನಮಗೆಲ್ಲ ತಿಳಿದಿತ್ತು. ಆರೋಪಿ ದಾವಣಗೆರೆ ಆಸ್ಪತ್ರೆಯಲ್ಲಿದ್ದಾನೆ ಎಂದು ತಿಳಿದ ಕಾರಣ ನಾವು ಅಲ್ಲಿ ಹೋಗಿ ನೋಡಿದಾಗ ಆರೋಪಿ ಚಲಿಸುವ ರೈಲಿನಿಂದ ಜಿಗಿದು ಗಾಯ ಮಾಡಿಕೊಂಡಿದ್ದು ಆತನಿಗೆ ಆಸ್ಪತ್ರೆಯಲ್ಲಿ ಉಪಚಾರ ನೀಡಿದ ಬಗ್ಗೆ ತಿಳಿಯಿತು. ವೈದ್ಯರನ್ನು ಕೇಳಿದಾಗ, ಆತನು ವೈದ್ಯರ ಸಲಹೆಗೆ ವಿರುದ್ದವಾಗಿ ರಾತ್ರಿ ಸುಮಾರು 11-00 ಕ್ಕೆ ಆಸ್ಪತ್ರೆಯಿಂದ ಹೋದನು ಎಂದು ತಿಳಿದುಬಂದಿತು. ಅಲ್ಲಿನ ಪರಿಸರದಲ್ಲಿ ಹುಡುಕಲಾಗಿ, ಅಲ್ಲಿ ಸಂಶಯಾಸ್ಪದವಾಗಿ ಓಡಾಡುತ್ತಿದ್ದ ಹುಡುಗನನ್ನು ಹಿಡಿದು ವಿಚಾರಿಸಿದಾಗ ಆತನೆ ಈ ಪ್ರಕರಣದ ಆರೋಪಿ

ಎಂದು ಖಚಿತಪಡಿಸಿಕೊಂಡು ಆತನನ್ನು ನಮ್ಮ ವಶಕ್ಕೆ ಪಡೆದು ಹುಬ್ಬಳ್ಳಿಗೆ ಮರಳಿದೆವು. ಚಾಸಾಃ 18 ರವರು ವಿವರವಾದ ವರದಿಯೊಂದಿಗೆ ಆರೋಪಿಯನ್ನು ತನಿಖಾಧಿಕಾರಿಗಳ ಮುಂದೆ ನಿಯಮಾನುಸಾರ ಹಾಜರುಪಡಿಸಿದರು.

4. ದಿಃ 24-05-2024 ರಂದು ಈ ಪ್ರಕರಣದ ಸಹಾಯಕ ತನಿಖಾಧಿಕಾರಿಗಳು ನಮ್ಮ ಠಾಣೆಗೆ ಬಂದು, ಗೋಕುಲ ರಸ್ತೆಯ ಹೊಸ ಬಸ್ ನಿಲ್ದಾಣದಲ್ಲಿ ಅಳವಡಿಸಿರುವ, ನಮ್ಮ ನಿಯಂತ್ರಣದಲ್ಲಿದ್ದ ಸಿಸಿ ಕ್ಯಾಮರಾದ ದೃಶ್ಯಾವಳಿಗಳನ್ನು ಪರಿಶೀಲಿಸಬೇಕು ಎಂದು ಹೇಳಿ ಸಿಬ್ಬಂದಿಯನ್ನು ಕಳುಹಿಸಿಕೊಡಬೇಕು ಎಂದರು. ಅದರಂತೆ ನಾನು ಠಾಣಾ ಪಿಸಿ 3043 ರವರನ್ನು ಅವರೊಂದಿಗೆ ಕಳುಹಿಸಿಕೊಟ್ಟೆನು. ಹೊಸ ನಿಲ್ದಾಣದಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮರಾದ ದೃಶ್ಯಾವಳಿಗಳನ್ನು ಮಹಜರ ಮೂಲಕ ಅವರು ಸಂಗ್ರಹಿಸಿಕೊಂಡರು.

5. ನಂತರ ಠಾಣೆಗೆ ಬಂದು, ನಮ್ಮ ಠಾಣೆಯ ನಿಯಂತ್ರಣದಲ್ಲಿದ್ದ ಸಿಸಿ ಕ್ಯಾಮರಾಗಳು ಯಾವುದೇ ಅಡಚಣೆ ಇಲ್ಲದೆ ಕಾರ್ಯ ನಿರ್ವಹಿಸುತ್ತಿದ್ದ ಬಗ್ಗೆ ನನ್ನಿಂದ ಧೃಡಿಕರಣ ಪತ್ರವನ್ನು ಕೋರಿದರು. ಅದರಂತೆ ನಾನು CEN ಪೋಲಿಸ ಠಾಣೆಯ ತಾಂತ್ರಿಕ ಸಹಾಯಕರಾದ ಚಾಸಾಃ 33 ರವರ ಸಹಯೋಗದಿಂದ ಧೃಡಿಕರಣ ಪತ್ರವನ್ನು ನಿಪಿ-4 ರಂತೆ ನೀಡಿರುತ್ತೇನೆ. ನಿಪಿ-4 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ ಕಾರಣ ಅದನ್ನು **ನಿಪಿ-4(ಬಿ)** ಎಂದು ಗುರುತಿಸಲಾಯಿತು. ನಮ್ಮ ನಿಯಂತ್ರಣದಲ್ಲಿದ್ದ ಸಿಸಿ ಕ್ಯಾಮರಾಗಳು ನೈಜ ಸಮಯಕ್ಕಿಂತ 11 ನಿಮಿಷ ಮುಂದೆ ಇದ್ದ ಬಗ್ಗೆ ನಾನು ಧೃಡಿಕರಣ ಪತ್ರದಲ್ಲಿ ನಮೂದಿಸಿರುತ್ತೇನೆ. ದಾವಣಗೆರೆಯಲ್ಲಿ ನಾವು ವಶಕ್ಕೆ ಪಡೆದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ವಿಸಿ ಮೂಲಕ ಹಾಜರಾದ ಆರೋಪಿಯನ್ನು ನೋಡಿ ಸಾಕ್ಷಿಯು ಗುರುತಿಸಿದ್ದಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ ಆರ್ ಎಸ್ ಮತ್ತು ಶ್ರೀ ಆರ್ ಆರ್ ಎಸ್ ವಕೀಲರಿಂದಃ**

ಆರೋಪಿ ಪರ ವಕೀಲರು ಗೈರು ಹಾಜರಿದ್ದಾರೆ. ವಿಸಿ ಮೂಲಕ ಹಾಜರಾದ ಆರೋಪಿಯನ್ನು ಪಾಟೀ ಸವಾಲು ಮಾಡುವಂತೆ ಹೇಳಲಾಗಿ, ತನಗೆ ಪಾಟೀ ಸವಾಲು ಮಾಡಲು ಬರುವುದಿಲ್ಲ ಎಂದು ನುಡಿದಿದ್ದಾನೆ. ಆರೋಪಿಯು ಕಾನೂನು ನೆರವು ಸಮಿತಿ ವತಿಯಿಂದ ವಕೀಲರನ್ನು ನೇಮಿಸಬೇಕೇ ಎಂದು ಕೇಳಿದಾಗ, ಪ್ರಕರಣದಲ್ಲಿ ತನ್ನ ಪರ ಈಗಾಗಲೇ ಹಾಜರಾಗಿರುವ ವಕೀಲರನ್ನೇ ಆಯ್ಕೆ ಮಾಡಿರುತ್ತಾರೆ.

ಪಾಟೀ ಸವಾಲನ್ನು ಮುಂದೂಡಲು ಯಾವುದೆ ಸಕಾರಣ ಇರುವುದಿಲ್ಲ. ಆದ ಕಾರಣ ಪಾಟೀ ಸವಾಲನ್ನು ಇಲ್ಲ ಎಂದು ಪರಗಣಿಸಲಾಯಿತು.

ಮರುವಿಚಾರಣೆ ಇಲ್ಲ.

***( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಿದೆ }***

**ಸಾ ಓ ಹೇ ಕೇ ಸರಿ ಇದೆ**

(ಪಲ್ಲವಿ ಬಿ ಆರ್)
**1ನೇ ಅಧಿಕ ಸತ್ರ ನ್ಯಾಯಾಧೀಶರು ಹುಬ್ಬಳ್ಳಿ**